ದಿನಾಂಕ : 27.08.2024
ಅಸಲು ದಾವೆ: 37/2015 ರಿಂದ 40/2015
ಡಿ.ಡಬ್ಲ್ಯೂ: 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :</u>**

ಬೋರೆಗೌಡ ರವರು ಸಣ್ಣಮ್ಮ ಮತ್ತು ಮರಿಗೌಡರವರಿಗೆ ಏನಾಗಬೇಕು ಎಂದರೆ ಸಾಕ್ಷಿ ದತ್ತು ಮಗ ಎಂದು ಉತ್ತರಿಸುತ್ತಾರೆ. ಸದರಿಯವರು ದತ್ತು ಮಗ ಎಂದು ಹೇಳಲು ಏನು ದಾಖಲಾತಿ ನೋಡಿದ್ದೀರಾ ಎಂದರೆ ಸಾಕ್ಷಿ ದತ್ತು ಪತ್ರ ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ದತ್ತು ಪತ್ರ 1951 ನೇ ಇಸವಿಯಲ್ಲಿ ಆಗಿರುತ್ತದೆ. ಬೋರೆಗೌಡ ನನ್ನ ತಂದೆಯಾಗಬೇಕು. ನಿಮ್ಮ ತಂದೆ ಬೋರೆಗೌಡರವರು ಚಿಕ್ಕೋನು ಬಿನ್ ಅಂಕೇಗೌಡರವರಿಗೆ ಜಮೀನು ಮಾರಾಟ ಮಾಡಿರುವುದಾಗಿ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ, ಯಾವಾಗ ಮಾರಾಟ ಮಾಡಿದರು ಎಂದರೆ ಸಾಕ್ಷಿ ಅವರಿಗೆ ಮಾರಾಟ ಮಾಡಿಲ್ಲ, ಕೆಂಪೇಗೌಡರವರಿಗೆ 1967 ರಲ್ಲಿ ಮಾರಾಟ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಮಾರಾಟ ಮಾಡಿದ ಜಮೀನಿನ ಪೂರ್ವಕ್ಕೆ - ಶಿಂಷಾ ನದಿ, ಪಶ್ಚಿಮಕ್ಕೆ - 6 ನೇ ಸರ್ವೆ ನಂಬರ್, ಉತ್ತರಕ್ಕೆ - ಕಿರಂಗೂರು ಗಡಿ, ದಕ್ಷಿಣಕ್ಕೆ - ಹಳೆಹಳ್ಳಿ ಗ್ರಾಮದ ಕಾರೆಗೂಟ ಮತ್ತು ಮಾಯಣ್ಣರವರ ಜಮೀನು. ಈ ಜಮೀನು ವಾದಿಯವರು ಹಾಜರು ಪಡಿಸಿರುವ 1905 ರ ಕ್ರಯ ಪತ್ರದ ನಮೂದಿರುವ ಜಮೀನು ಎಂದರೆ ಸಾಕ್ಷಿ ಜಮೀನು ಸರಿ, ಆದರೆ ಚೆಕ್ ಬಂದಿ ತಪ್ಪಾಗಿ ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಜಮೀನಿನ ಸರ್ವೆ ನಂ.7 ನ್ನು ಸೇರಿಸಿ ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಕೆಂಪೆಗೌಡರು 2 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ಹೇಳಿದ್ದೇನೆ. ಸರ್ವೆ ನಂ.7 ರಲ್ಲಿ ನಿಮಗೆ 21 ಎಕರೆ 2 ಗುಂಟೆ ಹಾಗೂ 1 ಎಕರೆ 30 ಗುಂಟೆ ಖರಾಬು ಸೇರಿ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವ ದಾಖಲಾತಿಗಳು ಇವೆ ಎಂದರೆ ಸಾಕ್ಷಿ ಆರ್.ಟಿ.ಸಿ, ಎಂ.ಆರ್. ಇಂಡೆಕ್ಸ್, ಕಂದಾಯ

ರಶೀದಿ, ಫಸಲು ಪಹಣಿ, ಆಕಾರ್ ಬಂದ್ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು 1905 ನೇ ಇಸವಿಯಲ್ಲಿ ವಾದಿಯ ಪೂರ್ವಜರು ಖರೀದಿಸಿದ ಸ್ವತ್ತಿನ ದಾಖಲಾತಿಗಳು ಎಂದರೆ ಸಾಕ್ಷಿ ಕ್ರಯ ಪತ್ರದಲ್ಲಿ ಸರ್ವೆ ನಂ.6 ರ ಜಮೀನು ಬರೆದುಕೊಂಡು ನಮ್ಮ ಸರ್ವೆ ನಂ.7 ರ ಚೆಕ್ ಬಂದಿ ತೋರಿಸಿದ್ದಾರೆ ಎಂದು ಉತ್ತರಿಸುತ್ತಾರೆ.

ನಾನು ಹಾಜರು ಪಡಿಸಿರುವ ದಾಖಲಾತಿಗಳು ಸರ್ವೆ ನಂ.5 ರ ಕ್ರಯ ಪತ್ರದ ಚೆಕ್ ಬಂದಿ ವ್ಯಾಪ್ತಿಯೊಳಗಿರುವ ಸ್ವತ್ತಿನ ದಾಖಲಾತಿಗಳು ಎಂದರೆ ಸಾಕ್ಷಿ ಸರ್ವೆ ನಂ.7 ರ ದಾಖಲಾತಿ ಎಂದು ಉತ್ತರಿಸುತ್ತಾರೆ. 1905 ರ ಕ್ರಯ ಪತ್ರದ ವಿವರಗಳನ್ನು ಓದಿ ತಿಳಿದುಕೊಂಡಿದ್ದೇನೆ. 1905 ರ ಕ್ರಯ ಪತ್ರದ ಪೂರ್ವಕ್ಕೆ : ಶಿಂಷಾ ನದಿ ಎಂದು ನಮೂದಿಸಿದ್ದಾರೆ, ಪಶ್ಚಿಮಕ್ಕೆ - 6 ನೇ ಸರ್ವೆ ನಂಬರ್ ಜಮೀನು ಎಂದು ನಮೂದಿಸಿದ್ದಾರೆ, ಉತ್ತರಕ್ಕೆ - ಕಿರಂಗೂರು ಗಡಿ ಎಂದು ನಮೂದಿಸಿದ್ದಾರೆ, ದಕ್ಷಿಣಕ್ಕೆ - ಹಳ್ಳ ಕೊರಕಲು ಎಂದು ನಮೂದಿಸಿದ್ದಾರೆ. ನಾನು ಹಾಜರು ಪಡಿಸಿರುವ ದಾಖಲಾತಿಗಳು ಈ ಮೇಲೆ ಹೇಳಿದ ಚೆಕ್ ಬಂದಿ ಒಳಗಡೆ ಇರುವ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ಆ ಕ್ರಯ ಪತ್ರಕ್ಕೆ ನಮ್ಮ ಜಮೀನಿನ ಚೆಕ್ ಬಂದಿ ನಮೂದಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಚೆಕ್ ಬಂದಿ ವ್ಯಾಪ್ತಿಯ ಒಳಗಿನ ಸ್ವತಿಗೆ ಸಂಬಂಧಪಟ್ಟಂತೆ ಈ ವ್ಯಾಜ್ಯ ನಡೆಯುತ್ತಿದೆ ಎಂದರೆ ಸಾಕ್ಷಿ ಸರ್ವೆ ನಂ.7 ರ ಚೆಕ್ ಬಂದಿ ತೋರಿಸಿ ಸರ್ವೆ ನಂ.6 ರ ಕ್ರಯ ಪತ್ರ ಮಾಡಿಕೊಂಡಿದ್ದಾರೆ ಆದರೆ ಸರ್ವೆ ನಂ.7, 7 ರಲ್ಲಿಯೇ ಇದೆ, ಸರ್ವೆ ನಂ.6, 6 ರಲ್ಲಿಯೇ ಇದೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.6 ರ ಚೆಕ್ ಬಂದಿ ಹೇಳಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ಈ ದಾವೆಯನ್ನು ಸರ್ವೆ ನಂ.7 ಕ್ಕೆ ಸಂಬಂಧಿಸಿದಂತೆ ಕೇಸ್ ಹಾಕಿಕೊಂಡು ಬಂದಿದ್ದಾರೆ ಎಂರದೆ ಸಾಕ್ಷಿ ಸರ್ವೆ ನಂ.6, 7 ಆಗಿದೆ ಎಂದು ಬಂದಿದ್ದಾರೆ , ಸರ್ವೆ ನಂ.6 ಮತ್ತು 7 ಎರಡು ಸ್ವತ್ತುಗಳು ಇವೆ ಎಂದು ಉತ್ತರಿಸುತ್ತಾರೆ.

ನಿಮ್ಮ ತಾತಂದಿರಿಗೆ ಸರ್ವೆ ನಂ.7 ರಲ್ಲಿ ಯಾವುದೇ ಜಮೀನು ಇರಲಿಲ್ಲ ಎಂದರೆ ಸಾಕ್ಷಿ ಇತ್ತು, ಅದನ್ನೇ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಮಗೆ ಸದರಿ ಸರ್ವೆ ನಂಬರಿನಲ್ಲಿ ಯಾವುದೇ ಜಮೀನು ಇರಲಿಲ್ಲ ಮತ್ತು ಸ್ವಾಧೀನವೂ ಇರಲಿಲ್ಲ ಎಂದರೆ ಸಾಕ್ಷಿ ಸ್ವಾಧೀನದಲ್ಲೇ ಇದ್ದೇ ಮಾರಾಟ ಮಾಡಿದ್ದು, ಖರೀದಿ ಮಾಡಿದವರು ಸ್ವಾಧೀನದಲ್ಲಿ ಇದ್ದಾರೆ

ಎಂದು ಉತ್ತರಿಸುತ್ತಾರೆ. ಸರ್ವೆ ನಂ.7/2 ಮತ್ತು 7/1 ಯಾವಾಗ ಆಯಿತು ಎಂದರೆ ಸಾಕ್ಷಿ 2014 ರಲ್ಲಿ ಎಂದು ಉತ್ತರಿಸುತ್ತಾರೆ. ಸರ್ವೆ ನಂ.7/2 ಮತ್ತು ಸರ್ವೆ ನಂ.7/1ರ ರೆವಿನ್ಯೂ ದಾಖಲಾತಿಗಳ ಮೇಲೆ ವಾದಿರವರು WP 43143/2001 ರಂತೆ ರಿಟ್ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಎ.ಸಿ.ನ್ಯಾಯಾಲಯದಲ್ಲಿ R.Misc.17/2003 ನ್ನು ವಾದಿಯರು ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ R.Misc.17/2003 ವಜಾ ಆದ ನಂತರ ಅದನ್ನು ಪ್ರಶ್ನಿಸಿ ವಾದಿಯರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ Revision appeal 26/2011-2012 ಅನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎರಡೂ ವಜಾ ಆಯಿತು ಎಂದು ಉತ್ತರಿಸುತ್ತಾರೆ. ಸದರಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ revision appeal ವಜಾ ಆದ ನಂತರ ಅದನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ WP 11953/2011 ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸದರಿ WP 11953/2011 ಪುರಸ್ಕರಿಸಿ ಪುನಃ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಪುನರ್ ಪರಿಶೀಲನೆ ಮಾಡಲು ಆದೇಶಿಸಿ ರಿಮಾಂಡ್ ಮಾಡಿದ್ದು ಅದರಂತೆ ಸದರಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ R.P.47/2012 ರಂತೆ ಪ್ರಕರಣ ದಾಖಲಿಸಿಕೊಳ್ಳಲಾಯಿತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಜಿಲ್ಲಾಧಿಕಾರಿಯವರು ದಿನಾಂಕ 11.02.2014 ರಲ್ಲಿ ಆದೇಶ ಮಾಡಿದ್ದು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಬಗೆಹರಿಸಿಕೊಳ್ಳುವಂತೆ ಆದೇಶಿಸಿದ್ದಾರೆ, ಆ ದಿನಾಂಕದಲ್ಲಿ ಯಾವುದೇ ಕೇಸ್ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಇದ್ದ ಪ್ರಕರಣ ಯಾವಾಗ ಆದೇಶವಾಯಿತು ಎಂದರೆ ಸಾಕ್ಷಿ 2013 ರಲ್ಲಿ ಆಗಿದೆ ದಿನಾಂಕ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. 2014 ರಲ್ಲಿ ಆದೇಶವಾಗಿದ್ದರೂ ನೀವು 2013 ರಲ್ಲಿ ಆದೇಶವಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಜಿಲ್ಲಾಧಿಕಾರಿಗಳ ನ್ಯಾಯಾಲದಲ್ಲಿ 2014 ರಂದು ಆದೇಶವಾದ ತಕ್ಷಣ ವಾದಿಯರು ಸಿವಿಲ್ ನ್ಯಾಯಾಲಯದಲ್ಲಿ ಕೇಸ್ ಹಾಕಿಕೊಂಡು ಇರುತ್ತಾರೆ ಎಂದು ತಕ್ಷಣವೇ ನೀವು ಸರ್ವೆ ನಂ. 7/2 ಮತ್ತು 7/1 ಅನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. 12 ನೇ ಪ್ರತಿವಾದಿಯೂ ಮಾರಾಟ ಮಾಡಿದ ತಕ್ಷಣ ನೀವು ಮತ್ತು 12 ನೇ ಪ್ರತಿವಾದಿ ವಾದಿಯರ ಸ್ವಾಧೀನಾನುಭವಕ್ಕೆ ದಿನಾಂಕ 02.04.2015 ರಂದು ತೊಂದರೆ ಕೊಡಲು ಹೋಗಿದ್ದೀರಿ ಎಂದರೆ ಸಾಕ್ಷಿ ಇಲ್ಲ ನಮ್ಮ

ಜಮೀನಿಗೆ ನಾವು ಯಾಕೆ ತೊಂದರೆ ಕೊಡಲು ಹೋಗುತ್ತೇವೆ ಎಂದು ಉತ್ತರಿಸುತ್ತಾರೆ. ನಿಮಗೆ ಸರ್ವೆ ನಂ.7/2 ಮತ್ತು 7/1 ರ ಮೇಲೆ ಯಾವುದೇ ಹಕ್ಕು ಇರಲಿಲ್ಲ ಮತ್ತು ಸ್ವಾಧೀನವೂ ಇರಲಿಲ್ಲ, ಹಾಗಾಗಿ ಸದರಿ ಸ್ವತ್ತುಗಳನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಲು ಯಾವುದೇ ರೀತಿಯ ಹಕ್ಕು ನಿಮಗೆ ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ, ನಮಗೆ ಹಕ್ಕು ಇದ್ದೇ ಮಾರಾಟ ಮಾಡಿದ್ದು ಎಂದು ಉತ್ತರಿಸುತ್ತಾರೆ. ನೀವು ಬರೆದುಕೊಟ್ಟಿರುವ ಪತ್ರ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸೃಷ್ಟಿಸಿಕೊಂಡಿರುವ ದಾಖಲಾತಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.